# ವಿಪಶ್ಯನ ವಾರ್ತೆ
# VIPASSANA VARTE

ಕನ್ನಡ ಮಾಸಪತ್ರಿಕೆ, **10 ಸೆಪ್ಟಂಬರ್ 2024** ಬೆಂಗಳೂರು, ಸಂಪುಟ 10, ಸಂಚಿಕೆ 05, ಪುಟಗಳು-4. **ಸಂಪಾದಕರು** : ಜಿ.ಟಿ.ಗೋವಿಂದಪ್ಪ

Kannada monthly, **10 September 2024**, Bengaluru, Vo 10, Issue No.05 Pages-4, KARKAN2015/68727 **Editor**: G.T. Govindappa.

ಚಂದಾ: ವಾರ್ಷಿಕ ರೂ. 30, ಆಜೀವ : ರೂ. 500.

ಪ್ರಕಾಶನ: ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್.

Subscription : Annual Rs. 30; Life : Rs. 500/-

Published by: Karnataka Vipassana Prachara Samiti Trust.


## ಧಮ್ಮ ಪದಗಳು

ನಗರಂ ಯಥಾ ಪಚ್ಚಂತಂ,
ಗುತ್ತಂ ಸಂತರಬಾಹಿರಂ,
ಏವಂ ಗೋಪೇಥ ಅತ್ತಾನಂ,
ಖಣೋ ವೇ ಮಾ ಉಪಚ್ಚಗಾ,
ಖಣಾತಿತಾ ಹಿ ಸೋಚಂತಿ ನಿರಯಮ್ಹಿ ಸಮಪ್ಪಿತಾ

ಗಡಿಯಲ್ಲಿರುವ ನಾಡನ್ನು ಒಳಗಿನಿಂದ ಮತ್ತು ಹೊರಗಿನಿಂದ ಹೇಗೆ ಎಚ್ಚರದಿಂದ ರಕ್ಷಿಸುವರೋ ಹಾಗೆ ನಿನ್ನನ್ನು ನೀನು ಕಾಯ್ದುಕೋ. ಒದಗಿಬಂದ ಈ (ಆಧ್ಯಾತ್ಮಿಕ) ಅವಕಾಶವನ್ನು ಬಿಡಬೇಡ. ಅವಕಾಶವನ್ನು ತಪ್ಪಿಸಿಕೊಂಡವರು ನರಕದಲ್ಲಿ ಜನಿಸಿದಾಗ ಶೋಕಪಡಬೇಕಾಗುತ್ತದೆ.

ಧಮ್ಮಪದ– 315, ನಿರಯವಗ್ಗ

## ಸತ್ಕರ್ಮಗಳು ಉತ್ತಮ ಪುನರ್ಜನ್ಮಕ್ಕೆ ಕಾರಣವಾಗುತ್ತವೆ

ಕಲ್ಯಾಣಮಿತ್ರ ಶ್ರಿ ಎಸ್.ಎನ್. ಗೋಯಂಕ (1924–2013)

ಒಂದು ಹಳ್ಳಿಯ ಮುಖಂಡನು ಬುದ್ಧರನ್ನು ಹೀಗೆ ಕೇಳಿಕೊಂಡನು: ಜನರು ಸಂತೋಷಕರವಾದ ಜನ್ಮ ಪಡೆಯಲು ಅನೇಕ ಧಾರ್ಮಿಕ ಆಚರಣೆಗಳನ್ನು ಮಾಡುತ್ತಾರೆ. ವಿವಿಧ ರೀತಿಯ ಉಡುಪು ಮತ್ತು ಆಭರಣ, ಹೂಮಾಲೆಗಳನ್ನು ಹಾಕಿಕೊಳ್ಳುತ್ತಾರೆ, ಸುಗಂಧ ಮತ್ತು ಲೇಪನಗಳನ್ನು ಹಾಕಿಕೊಳ್ಳುತ್ತಾರೆ. ಅನೇಕ ರೀತಿಯಲ್ಲಿ ಅಗ್ನಿಯನ್ನು ಆರಾಧಿಸುತ್ತಾರೆ, ಇತರ ಧಾರ್ಮಿಕ ಕಾರ್ಯಗಳನ್ನು ಆಚರಿಸಿ ತಾವು ಮಾಡಬೇಕಾಗಿರುವುದೆಲ್ಲವನ್ನೂ ಮಾಡಿ ಮುಗಿಸಿದ್ದೇವೆ ಎಂದು ಭಾವಿಸುತ್ತಾರೆ. ಇನ್ನೂ ಕೆಲವರು ಮಾಟ ಮಂತ್ರಗಳನ್ನು ಮಾಡಿ ಅದೃಶ್ಯ ಶಕ್ತಿಗಳೊಡನೆ ಸಂಪರ್ಕ ಸಾಧಿಸಿ ಅವುಗಳ ಸಹಾಯದಿಂದ ಜನರನ್ನು ಸ್ವರ್ಗಕ್ಕೆ ಕರೆದೊಯ್ಯುವುದಾಗಿ ಹೇಳಿಕೊಳ್ಳುತ್ತಾರೆ. ಪೂಜ್ಯರೇ! ನೀವು ಎಲ್ಲವನ್ನು ಬಲ್ಲವರಾಗಿದ್ದೀರಿ. ದಯಮಾಡಿ ಪ್ರಪಂಚದ ಎಲ್ಲಾ ಜೀವಿಗಳು ತಮ್ಮ ಮರಣದ ನಂತರ ಸಂತೋಷದ ಸ್ಥಿತಿಯಲ್ಲಿ ಸ್ವರ್ಗದಲ್ಲಿ ಜನಿಸುವಂತೆ ಏನನ್ನಾದರೂ ಮಾಡಿ.

ಬುದ್ಧರು ಇದಕ್ಕೆ ಪ್ರತಿಯಾಗಿ ಅವನನ್ನು ಹೀಗೆ ಪ್ರಶ್ನಿಸಿದರು. "ಒಬ್ಬ ವ್ಯಕ್ತಿಯು ಕೊಲೆ ಮಾಡುತ್ತಾನೆ,: ಕಳ್ಳತನ ಮಾಡುತ್ತಾನೆ, ವ್ಯಭಿಚಾರ ಮಾಡುತ್ತಾನೆ, ಸುಳ್ಳು ಹೇಳುತ್ತಾನೆ, ಚಾಡಿ ಹೇಳುತ್ತಾನೆ, ಕಠೋರ ಮಾತುಗಳನ್ನಾಡುತ್ತಾನೆ, ವಾಚಾಳಿ, ದುರಾಸೆಯುಳ್ಳವನು, ಕೀಳು, ಮನಸ್ಥಿತಿಯವನು ಮತ್ತು ತಪ್ಪು ಅಭಿಪ್ರಾಯಗಳನ್ನು ಹೊಂದಿದ್ದಾನೆ. ಇಂತಹ ವ್ಯಕ್ತಿಯು ಸ್ವರ್ಗಕ್ಕೆ ಹೋಗಲು ಅರ್ಹನೆಂದು ನೀನು ಭಾವಿಸುತ್ತೀಯಾ? ಅವನು ಅಲ್ಲಿಗೆ ಹೋಗಲು ಯೋಗ್ಯನೇ? ಅಥವಾ ಅವನ ಮರಣದ ನಂತರ ಹಲವಾರು ಜನರು ಅಲ್ಲಿ ಸೇರಿ ಅವನ ಒಳ್ಳೆಯ ಭವಿಷ್ಯಕ್ಕಾಗಿ ಮತ್ತು ಅವನು ಸ್ವರ್ಗದಲ್ಲಿ ಜನಿಸಲಿ ಎಂದು ಕೈಮುಗಿದು ಪ್ರಾರ್ಥಿಸಿದರೆ, ಅವರ ಈ ಪ್ರಾರ್ಥನೆಯಿಂದ ಅವನು ನಿಜವಾಗಿಯೂ ಸ್ವರ್ಗದಲ್ಲಿ ಹುಟ್ಟುತ್ತಾನೆಯೇ? ಇಲ್ಲ, ವ್ಯಕ್ತಿಯ ಮರಣದ ನಂತರ ಮಾಡುವ ಯಾವುದೇ ಕ್ರಿಯೆಗಳಿಂದ ಅವನನ್ನು ಬಿಡುಗಡೆಗೊಳಿಸಲು ಸಾಧ್ಯವಿಲ್ಲ, ಇದು ಅಸಾಧ್ಯ."

ಇದನ್ನು ಒಂದು ಉದಾಹರಣೆಯಿಂದ ಅರ್ಥ ಮಾಡಿಕೊಳ್ಳೋಣ. ಒಂದು ದೊಡ್ಡ ಸರೋವರದಲ್ಲಿ ಒಬ್ಬ ವ್ಯಕ್ತಿಯು ಒಂದು ದೊಡ್ಡ ಕಲ್ಲನ್ನು ಹಾಕುತ್ತಾನೆ. ಅದು ತನ್ನದೇ ಆದ ಭಾರದಿಂದ ನೀರಿನಲ್ಲಿ ಮುಳುಗುತ್ತದೆ. ಜನರ ಒಂದು ದೊಡ್ಡ ಗುಂಪು ಸೇರಿ ಕಲ್ಲನ್ನು ಪ್ರಾರ್ಥಿಸುತ್ತಾರೆ. ಅದನ್ನು ಪ್ರಸನ್ನಗೊಳಿಸುವ ಶಪಥ ಮಾಡುತ್ತಾರೆ ಅಥವಾ ಪೂಜಿಸುತ್ತಾರೆ ಅಥವಾ ಇನ್ನಾವುದೋ ಧಾರ್ಮಿಕ ವಿಧಿಯನ್ನು ಆಚರಿಸಿದರೆ ಈ ಕಲ್ಲು ನೀರಿನ ಮೇಲೆ ತೇಲಲು ಸಾಧ್ಯವೇ?

ಇನ್ನೊಂದು ಉದಾಹರಣೆ, ಒಬ್ಬ ವ್ಯಕ್ತಿಯು ಬೆಣ್ಣೆ ಮತ್ತು ಎಣ್ಣೆ ತುಂಬಿದ ಮಡಕೆಯನ್ನು ನೀರಿನಲ್ಲಿ ಒಡೆದರೆ, ಅದರಲ್ಲಿರುವ ಬೆಣ್ಣೆ ಮತ್ತು ಎಣ್ಣೆಯು ನೀರಿನ ಮೇಲೆ ತೇಲಲು ಪ್ರಾರಂಭಿಸುತ್ತದೆ. ಅವನು ಕಲ್ಲು ಮತ್ತು ಬೆಣಚು ಕಲ್ಲುಗಳಿಂದ ತುಂಬಿದ ಮತ್ತೊಂದು ಮಡಕೆಯನ್ನು ನೀರಿನಲ್ಲಿ ಒಡೆದರೆ, ಕಲ್ಲುಗಳು ಮತ್ತು ಬೆಣಚುಕಲ್ಲುಗಳು ತಮ್ಮ ಭಾರದಿಂದ ನೀರಿನಲ್ಲಿ ಮುಳುಗುತ್ತವೆ. ನಂತರ, ಒಂದು ವೇಳೆ ಅವನು ಧಾರ್ಮಿಕ ವಿಧಿಗಳನ್ನು ಮಾಡಿ "ಓ ಬೆಣ್ಣೆಯೇ! ನೀವು ನೀರಿನೊಳಗೆ ಮುಳುಗಿರಿ, ನೀರಿನಲ್ಲಿ ಮುಳುಗಿ. ಓ ಕಲ್ಲು ಮತ್ತು ಬೆಣಚುಕಲ್ಲುಗಳೇ! ನೀವು ನೀರಿನ ಮೇಲೆ ಬನ್ನಿ, ನೀರಿನ ಮೇಲೆ ಬನ್ನಿ." ಎಂದು ಪ್ರಾರ್ಥಿಸಿದರೆ, ಇದು ನಿಜವಾಗಿಯೂ ಘಟಿಸುತ್ತದೆಯೇ? ಇದನ್ನು ನೀವೆ ಸ್ವತಃ ಮಾಡಿ ನೋಡಿ.

ಓಹ್, ಮುಖ್ಯಸ್ಥನೇ! ಅದೇ ರೀತಿಯಲ್ಲಿ, ಯಾವುದೇ ವ್ಯಕ್ತಿಯು ಜೀವಿಗಳನ್ನು ಕೊಲ್ಲದಿದ್ದರೆ, ಕಳ್ಳತನ ಮಾಡದಿದ್ದರೆ, ಲೈಂಗಿಕ ದುರ್ವತನೆಯಿಂದ ದೂರವಿದ್ದರೆ, ಸುಳ್ಳನ್ನು ಹೇಳದಿದ್ದರೆ ಮತ್ತು ಇತರೆ ಬೇರೆ ದುಷ್ಕೃತ್ಯಗಳನ್ನು ಮಾಡದಿದ್ದರೆ ಮತ್ತು ನಿಜವಾದ ಧಾರ್ಮಿಕ ಜೀವನವನ್ನು ನಡೆಸಿದರೆ, ಆಗ ಮರಣದ ನಂತರ ಅವನು ಖಂಡಿತವಾಗಿ ಉನ್ನತ ಲೋಕಗಳಿಗೆ ಮಾತ್ರ ಹೋಗುತ್ತಾನೆ. ಅವನು ಉನ್ನತ ಸ್ಥಿತಿಗಳನ್ನು ಪಡೆಯುತ್ತಾನೆ. ಯಾರ ಶಾಪದಿಂದಲೂ ಅವನು ಶೋಚನೀಯ ಸ್ಥಿತಿ ಇರುವ ನರಕಕ್ಕೆ ಹೋಗಲಾರನು. ಅವನ ಸತ್ಕರ್ಮಗಳು ಅವನನ್ನು ಉನ್ನತ ಲೋಕಗಳಿಗೆ ಮಾತ್ರ ಕೊಂಡೊಯ್ಯುತ್ತವೆ. ಅವನು ಉನ್ನತ ಲೋಕಗಳಿಗೆ ಹೋಗುವುದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಇದು ಪ್ರಕೃತಿಯ ಮುರಿಯಲಾಗದ ನಿಯಮ.

ಇದೇ ತರಹದ ಇನ್ನೊಂದು ಸಂದರ್ಭದಲ್ಲಿ ಬುದ್ಧರಿಗೆ ಎಲ್ಲರ ಮೇಲೂ ಸಮಾನವಾಗಿ ಕರುಣೆ ಇದೆಯೇ ಎಂದು ಅವರನ್ನು ಪ್ರಶ್ನಿಸಲಾಯಿತು. ಹಾಗಾದರೆ ಏಕೆ, ಕೆಲವರು ಹೆಚ್ಚಿನ ಲಾಭವನ್ನು ಪಡೆಯುತ್ತಾರೆ, ಕೆಲವರು ಕಡಿಮೆ ಲಾಭವನ್ನು ಪಡೆಯುತ್ತಾರೆ ಮತ್ತೆ ಕೆಲವರು ಧಮ್ಮದಿಂದ ಯಾವ ಪ್ರಯೋಜನವನ್ನೂ ಪಡೆಯುವುದಿಲ್ಲ? ಏಕೆ ಹೀಗಾಗುತ್ತದೆ? ಅವರ ಕರುಣೆಯಿಂದ ಎಲ್ಲರೂ ಸಮಾನ ಪ್ರಮಾಣದ ಪ್ರಯೋಜನವನ್ನು ಏಕೆ ಪಡೆಯಲು ಸಾಧ್ಯವಾಗುತ್ತಿಲ್ಲ?

ಇದನ್ನು ಬುದ್ಧರು ಒಬ್ಬ ರೈತನ ಉದಾಹರಣೆ ಕೊಟ್ಟು ವಿವರಿಸುತ್ತಾರೆ. ಒಬ್ಬ ರೈತನು ಮೂರು ಬಗೆಯ ಭೂಮಿಯನ್ನು ಹೊಂದಿದ್ದಾನೆ. ಮೂರು ಬಗೆಯ ಭೂಮಿಗಳು ಅಂದರೆ 1) ಬಹಳ ಫಲವತ್ತಾದದ್ದು 2) ಕಡಿಮೆ ಫಲವತ್ತಾದದ್ದು. 3) ಸಂಪೂರ್ಣವಾಗಿ ಬಂಜರು ಭೂಮಿ. ಪ್ರಸಕ್ತ ಸನ್ನಿವೇಶದಲ್ಲಿ ರೈತನು ಮೊದಲು ಫಲವತ್ತಾದ ಭೂಮಿಯಲ್ಲಿ, ನಂತರ ಕಡಿಮೆ ಫಲವತ್ತತೆಯಿರುವ ಭೂಮಿಯಲ್ಲಿ, ಕೊನೆಯದಾಗಿ ಬಂಜರು ಭೂಮಿಯಲ್ಲಿ ಬೀಜ ಬಿತ್ತುತ್ತಾನೆ. ಒಂದೇ ಬಗೆಯ ಬೀಜವನ್ನು ಸರಿಸಮನಾದ ಶ್ರಮ ಮತ್ತು ಜಾಗರೂಕತೆಯಿಂದ ಬಿತ್ತುತ್ತಾನೆ. ಆದರೆ ಅವುಗಳ ಫಸಲು ಸಮನಾಗಿರುವುದಿಲ್ಲ. ಅದೇ ರೀತಿ ಧಮ್ಮ ಕಲಿಯಲು ನನ್ನ ಬಳಿ ಮೂರು ಬಗೆಯ ಜನರು ಬರುತ್ತಾರೆ. ಮೊದಲ ವರ್ಗದಲ್ಲಿ ಗಂಭೀರ ಸಾಧಕರಿರುತ್ತಾರೆ. ಅವರು ಫಲವತ್ತಾದ ಭೂಮಿಯಂತೆ. ಅವರಲ್ಲಿ ಬಿತ್ತಿದ ಬೀಜಗಳು ಬಹಳ ಬೇಗನೆ ಫಲ ಕೊಡುತ್ತವೆ, ಏಕೆಂದರೆ ಅವರು ಧಮ್ಮವನ್ನು ಸಂಪೂರ್ಣ

ಶ್ರದ್ಧೆ ಮತ್ತು ದೃಢ ಸಂಕಲ್ಪದಿಂದ ಅಭ್ಯಾಸ ಮಾಡಲು ಪ್ರಾರಂಭಿಸುತ್ತಾರೆ. ಸಾಮಾನ್ಯ ಗೃಹಸ್ಥರು, ಪುರುಷ ಮತ್ತು ಮಹಿಳೆ ಇಬ್ಬರೂ ಎರಡನೆಯ ವರ್ಗದ ಸಾಧಕರು. ಅವರು ತಮ್ಮ ದೈನಂದಿನ ಪ್ರಾಪಂಚಿಕ ಕೆಲಸಗಳನ್ನು ಮಾಡುವುದರ ಜೊತೆಗೆ ಧಮ್ಮವನ್ನೂ ಅಭ್ಯಸಿಸುತ್ತಾರೆ. ಅವರೂ ಶ್ರದ್ಧೆ ಮತ್ತು ದೃಢಸಂಕಲ್ಪ ಹೊಂದಿರುತ್ತಾರೆ. ಆದರೆ ಪ್ರಾಪಂಚಿಕ ಜೀವನದ ಎಡರುತೊಡರುಗಳನ್ನು ಸಹ ಅವರು ಎದುರಿಸುತ್ತಾರೆ. ಆದರೂ ಧರ್ಮಮಾರ್ಗದಲ್ಲಿ ನಡೆಯುತ್ತಾ ತಮ್ಮ ಕಲ್ಯಾಣಕ್ಕಾಗಿ ಕೆಲಸ ಮಾಡುತ್ತಾರೆ. ಮೂರನೆಯದಾಗಿ, ಬರಡು ಭೂಮಿಯ ತರ ಇರುವ ಜನರು. ಇತರರಿಗೆ ಬೋಧಿಸಿದಂತೆಯೇ ಇವರಿಗೂ ಬೋಧಿಸುತ್ತೇನೆ. ಅವರು ತಮ್ಮದೇ ಆದ ಮತೀಯ ಆಚಾರ ವಿಚಾರಗಳಲ್ಲಿ ತೊಡಗಿಸಿಕೊಂಡು ಬೇರೆ ಬೇರೆ ತತ್ವ ಸಿದ್ಧಾಂತಗಳಲ್ಲಿ ನಂಬಿಕೆ ಇಟ್ಟಿರುವ ಕಾರಣದಿಂದ ಸರಿಯಾದ ರೀತಿಯಲ್ಲಿ ಧಮ್ಮವನ್ನು ಅಭ್ಯಸಿಸಲು ಅವರಿಗೆ ಸಾಧ್ಯವಾಗುವುದಿಲ್ಲ. ಅವರು ಎಷ್ಟರಮಟ್ಟಿಗೆ ಕಲಿತು, ಅರ್ಥ ಮಾಡಿಕೊಂಡು ಧಮ್ಮವನ್ನು ಅಭ್ಯಸಿಸುತ್ತಾರೋ ಅಷ್ಟರಮಟ್ಟಿಗೆ ಪ್ರಯೋಜನವನ್ನು ಪಡೆಯುತ್ತಾರೆ. ಕೆಲವರು ಧಮ್ಮವನ್ನು ಸುಮ್ಮನೆ ಕೇಳಿ ಹೊರಟು ಹೋಗುತ್ತಾರೆ. ಅವರು ಅದನ್ನು ಅಭ್ಯಾಸ ಮಾಡುವುದಿಲ್ಲ. ಇದರ ಪರಿಣಾಮವಾಗಿ, ಅವರು ಸಂಪೂರ್ಣವಾಗಿ ಧಮ್ಮದಿಂದ ವಂಚಿತರಾಗುತ್ತಾರೆ. ಆದರೆ ನನ್ನ ಕರುಣೆ ಅವರೆಲ್ಲರ ಮೇಲೆ ಯಾವಾಗಲೂ ಸರಿಸಮನಾಗಿರುತ್ತದೆ.

ಬುದ್ಧರು ಇನ್ನೊಂದು ಉದಾಹರಣೆ ಕೊಟ್ಟು ಇದನ್ನು ವಿವರಿಸಿದರು. ಒಬ್ಬ ವ್ಯಕ್ತಿಯು ಮೂರು ಹೂಜಿಗಳನ್ನು ಹೊಂದಿದ್ದಾನೆ. ಒಂದು ರಂಧ್ರವಿಲ್ಲದ್ದು, ಎರಡನೆಯದು ಸಣ್ಣ ತೂತು ಇರುವಂಥದ್ದು ಮತ್ತು ಮೂರನೆಯದು ದೊಡ್ಡ ರಂಧ್ರ ಇರುವಂಥದ್ದು ಎಂದಿಟ್ಟುಕೊಳ್ಳಿ. ಅವನು ಮೊದಲು ಇಡೀ ದಿನ ಬಳಸುವುದಕ್ಕಾಗಿ ರಂಧ್ರವಿಲ್ಲದ ಹೂಜಿಯಲ್ಲಿ ನೀರನ್ನು ತುಂಬುತ್ತಾನೆ. ನಂತರ ಅವನು ಇಡೀ ದಿನ ಬಳಸುವುದಕ್ಕಾಗದಿದ್ದರೂ ಸ್ವಲ್ಪ ಸಮಯದ ಮಟ್ಟಿಗಾದರೂ ಉಪಯೋಗಿಸಬಹುದು ಎಂಬ ತಿಳುವಳಿಕೆಯಿಂದ ಎರಡನೇ ಹೂಜಿಯಲ್ಲಿ ನೀರನ್ನು ತುಂಬುತ್ತಾನೆ. ತದನಂತರ ಸ್ನಾನ ಮಾಡುವುದಕ್ಕೆ ಅಥವಾ ಬಟ್ಟೆ ಮತ್ತು ಪಾತ್ರೆಗಳನ್ನು ತೊಳೆಯಲು ನೀರನ್ನು ತಕ್ಷಣವೇ ಬಳಸಬಹುದು ಎಂಬ ಉದ್ದೇಶದಿಂದ ಮೂರನೆಯ ಹೂಜಿಯಲ್ಲಿ ನೀರನ್ನು ತುಂಬುತ್ತಾನೆ. ಬಹಳ ಗಂಭೀರ ಧ್ಯಾನಾರ್ಥಿಗಳು ಮೊದಲನೆಯ ಹೂಜಿ ಇದ್ದಂತೆ. ಸಾಮಾನ್ಯ ಗೃಹಸ್ಥರು,ಪುರುಷ ಮತ್ತು ಮಹಿಳೆ ಇಬ್ಬರೂ ಅಡಚಣೆಗಳು ಇದ್ದಾಗ್ಯೂ ಧಮ್ಮವನ್ನು ಅಭ್ಯಸಿಸುವವರು ಎರಡನೇ ಹೂಜಿ ಇದ್ದಂತೆ. ಅನೇಕ ಮತೀಯ ಆಚಾರ ವಿಚಾರಗಳಲ್ಲಿ ಸಿಕ್ಕಿಹಾಕಿಕೊಂಡಿರುವ ಜನರು ಮೂರನೇ ಹೂಜಿಯಲ್ಲಿ ತುಂಬಿದ ನೀರಿನಂತೆ. ನಾನು ಸರಿಸಮನಾಗಿ ಎಲ್ಲರ ಮೇಲೆ ಕರುಣೆಯನ್ನು ಬೀರುತ್ತೇನೆಯಾದರೂ ಧರ್ಮವನ್ನು ಎಷ್ಟೆಷ್ಟು ಕಲಿತು, ಅದನ್ನು ಅಭ್ಯಸಿಸುತ್ತಾರೋ ಅಷ್ಟರಮಟ್ಟಿಗೆ ಅವರು ಪ್ರಯೋಜನ ಪಡೆಯುತ್ತಾರೆ.

ಧ್ಯಾನ ಸಾಧಕರೇ! ಬನ್ನಿ ! ಬುದ್ಧರು ನೀಡಿದ ಈ ಉದಾಹರಣೆಗಳಿಂದ ನಾವೂ ಪಾಠ ಕಲಿಯೋಣ ಮತ್ತು ಧಮ್ಮದ ಫಲವತ್ತಾದ ಭೂಮಿಯಾಗೋಣ, ಪಂಚಶೀಲಗಳನ್ನು ಕಟ್ಟುನಿಟ್ಟಾಗಿ ಶ್ರದ್ಧೆಯಿಂದ ಪಾಲಿಸೋಣ. ಬಲವಾದ ಶೀಲದಿಂದ ನಮ್ಮ ಸರಿಯಾದ ಏಕಾಗ್ರತೆಯನ್ನು ಬಲಿಷ್ಠಗೊಳಿಸೋಣ.

ಸರಿಯಾದ ಏಕಾಗ್ರತೆಯಿಂದ ಅನಿಚ್ಚಾದ ಸ್ವಾನುಭವದ ಜ್ಞಾನವನ್ನು ಆಂತರ್ಯದಿಂದ ಬೆಳೆಸಿಕೊಳ್ಳೋಣ ಮತ್ತು ಸತ್ಕಾರ್ಯಗಳನ್ನು ಮಾಡುವ ಮೂಲಕ ಸರಿಯಾದ ರೀತಿಯಲ್ಲಿ ನಮ್ಮ ಪ್ರಗತಿಯನ್ನು ಸಾಧಿಸಿಕೊಳ್ಳೋಣ. ಇದರಲ್ಲಿ ನಮ್ಮ ಒಳಿತಿದೆ ಮತ್ತು ಕಲ್ಯಾಣವಿದೆ.

**ಜಾಗೃತಿ ಮೂಡಿಸುವ ಮಾತುಗಳು**

(04.03.2012ರಂದು ವಾಶಿಯ ಧಮ್ಮ ವಿಪುಲ, ವಿಪಶ್ಯನ ಕೇಂದ್ರದಲ್ಲಿ ಶಿಬಿರವನ್ನು ಉದ್ಘಾಟಿಸಿದ ಸಂದರ್ಭದಲ್ಲಿ ಪೂಜ್ಯ ಗುರೂಜಿ ಅವರು ನೀಡಿದ ಪ್ರವಚನದ ಸಾರಾಂಶ)

ಕೇಂದ್ರದಲ್ಲಿ ಯಾವಾಗ ಧಮ್ಮವನ್ನು ಅಭ್ಯಸಿಸುತ್ತೇವೆಯೋ ಆಗ ಮಾತ್ರ ಅದು ಪವಿತ್ರವಾಗುತ್ತದೆ. ಒಂದು ಒಳ್ಳೆಯ ಕೇಂದ್ರವು ಸ್ಥಾಪಿತವಾಗಿದೆ. ಒಟ್ಟುಗೂಡಿ ಧ್ಯಾನ ಮಾಡಲು ಅನೇಕ ಧ್ಯಾನ ಸಾಧಕರು ಇಲ್ಲಿಗೆ ಬಂದಿದ್ದಾರೆ. ಬೇರೆ ಕೇಂದ್ರಗಳ ತರಹವೇ ಇದೂ ಅಭಿವೃದ್ಧಿಯಾಗುತ್ತದೆ ಮತ್ತು ಎಲ್ಲರೂ ಇದರಿಂದ ಪ್ರಯೋಜನವನ್ನು ಪಡೆಯುತ್ತಾರೆ. ಹೀಗಾಗಲು ಪ್ರತಿಯೊಬ್ಬರಲ್ಲೂ ಧಮ್ಮ ಬೀಜಗಳು ಬೆಳೆಯುವುದು ಅತ್ಯಗತ್ಯ. ಎಲ್ಲರೂ ಧಮ್ಮದಲ್ಲಿ ಪ್ರಗತಿ ಹೊಂದುತ್ತಾರೆ. ಸಾಧಕರು ಗಂಭೀರವಾಗಿ ಧ್ಯಾನ ಮಾಡಲು ಈ ಕೇಂದ್ರಗಳಿಗೆ ಬರುತ್ತಾರೆ. ಧಮ್ಮ ಕೇಂದ್ರಕ್ಕೆ ಹೋಗಿ ಹತ್ತು ದಿನಗಳ ಕಾಲ ಅಲ್ಲಿ ಇರುವುದನ್ನು ಒಂದು ಧಾರ್ಮಿಕ ಆಚರಣೆ ಎಂದು ಪರಿಗಣಿಸಬಾರದು. ಸುಮ್ಮನೆ ಅಲ್ಲಿಗೆ ಹೋಗುವುದರಿಂದ ಮಾತ್ರ ನಾವು ಪರಿವರ್ತಿತರಾಗಿ, ಬಿಡುಗಡೆ ಹೊಂದುತ್ತೇವೆ ಎಂದು ನಾವು ನಿರೀಕ್ಷಿಸಬಾರದು.

ಧಮ್ಮ ಅಂದರೆ ಒಳ್ಳೆಯ ನಡತೆ ಧಮ್ಮವನ್ನು ಜೀವನದಲ್ಲಿ ಅಳವಡಿಸಿಕೊಳ್ಳುತ್ತಾ ಅದನ್ನು ಬೆಳೆಸಿಕೊಳ್ಳಬೇಕು. ವ್ಯಕ್ತಿಯು ಧರ್ಮದಿಂದ ಪ್ರಯೋಜನ ಪಡೆಯದಿದ್ದರೆ, ಇತರರು ಅದರಿಂದ ಪ್ರಯೋಜನ ಪಡೆಯಲು ಅವನು ಹೇಗೆ ಸಹಾಯ ಮಾಡಬಲ್ಲನು? ಆದ್ದರಿಂದ ವ್ಯಕ್ತಿಯು ತನ್ನ ಒಳಿತನ್ನು ಸಾಧಿಸಲು, ತಾನು ಧಮ್ಮದಲ್ಲಿ ಪಕ್ವವಾಗಲು ಪ್ರಯತ್ನಿಸಬೇಕು. ಇತರರನ್ನು ತೃಪ್ತಿಪಡಿಸಲು ಮತ್ತು ಸಂತೋಷಪಡಿಸಲು ಅಲ್ಲ. ವ್ಯಕ್ತಿಯು ಧರ್ಮದಲ್ಲಿ ಪಕ್ವವಾಗುತ್ತಾ ತನ್ನ ಒಳಿತನ್ನು ಯಾವಾಗ ಸಾಧಿಸುತ್ತಾನೋ ಆಗ ಮಾತ್ರ ಅವನು ತಮಗೆ ತಾವೇ ಒಳ್ಳೆಯದನ್ನು ಮಾಡಿಕೊಳ್ಳಲು ಇತರರಿಗೆ ಸಹಾಯ ಮಾಡಬಲ್ಲನು. ವ್ಯಕ್ತಿಯು ತಾನು ಧರ್ಮದಲ್ಲಿ ಪಕ್ವವಾಗದೆ, ಎಲ್ಲರೂ ವಿಪಶ್ಯನವನ್ನು ಅಭ್ಯಾಸ ಮಾಡಬೇಕೆಂದು ಆಶಿಸಿದರೆ, ಅವನು ಭ್ರಮೆಯಲ್ಲಿ ಬದುಕುತ್ತಿದ್ದಾನೆ ಎಂದರ್ಥ. ತನ್ನಲ್ಲಿ ಧಮ್ಮವು ಬೇರೂರಿದೆಯೇ ಮತ್ತು ವಿಕಸಿಸುತ್ತಿದೆಯೇ ಎಂದು ಅವನು ಆತ್ಮಾವಲೋಕನ ಮಾಡಿಕೊಳ್ಳಬೇಕು, ಆಗ ಮಾತ್ರ ಧಮ್ಮವು ಹೊರಗಡೆ ಸುಲಭವಾಗಿ ಹರಡುತ್ತದೆ.

ನಾವು ಇದನ್ನು ಒಂದು ಕಾರ್ಯಸಾಧ್ಯವಲ್ಲದ ಧ್ಯಾನ ಕೇಂದ್ರವನ್ನಾಗಿ ಮಾಡಬಾರದು. ಹತ್ತು, ಇಪ್ಪತ್ತು, ಐವತ್ತು ಅಥವಾ ನೂರು ವರ್ಷಗಳ ನಂತರ ಇಲ್ಲಿ ಯಾವುದೋ ಒಂದು ರೀತಿಯ ಧ್ಯಾನವನ್ನು ಅಭ್ಯಾಸ ಮಾಡಲಾಗುತ್ತಿತ್ತು. ಇಲ್ಲಿ ಒಂದು ಧ್ಯಾನ ಕೇಂದ್ರವಿತ್ತು, ಇಂತಹವರು ಆಚಾರ್ಯರಿದ್ದರು ಎಂದು ಅವರು ಪ್ರಾಸಂಗಿಕವಾಗಿ ಹೇಳುವಂತಾಗ ಬಾರದು.... ಇದನ್ನು ಈ ರೀತಿಯಾಗಿ ನೆನಪಿಸಿಕೊಳ್ಳಬಾರದು. ಇಲ್ಲಿಂದ ಧಮ್ಮ ಎಲ್ಲೆಡೆ ಹರಡಲಿ; ಆದರೆ ವಿಪಶ್ಯನವನ್ನು ಅಭ್ಯಾಸ ಮಾಡಲು ಇಲ್ಲಿಗೆ ಬರುವ ಪ್ರತಿಯೊಬ್ಬ ವ್ಯಕ್ತಿಯಲ್ಲೂ ಅದು ಉದಯಿಸಿದಾಗ ಮಾತ್ರ ಅದು ಹರಡುತ್ತದೆ. ಧಮ್ಮವನ್ನು ಬೋಧಿಸಲು, ಅದನ್ನು ಬಲಯುತವಾಗಿ ಮಾಡಲು ಈ ಸ್ಥಳವಿದೆ. ಇದು ನಮ್ಮ ಸ್ವಂತ ಪ್ರಯೋಜನಕ್ಕಾಗಿ, ನಮ್ಮ ಸ್ವಂತ ಕಲ್ಯಾಣಕ್ಕಾಗಿ ಹಾಗೂ ಇತರರ ಪ್ರಯೋಜನಕ್ಕಾಗಿ, ಧಮ್ಮದಲ್ಲಿ ದೃಢವಾಗಿ ಸ್ಥಾಪಿತಗೊಳ್ಳಲು ಈ ಸ್ಥಳವಿದೆ.

ಧಮ್ಮವನ್ನು ಅಭ್ಯಸಿಸುವಾಗ ಯಾರಾದರೂ ನಾನು ಈ ಕೇಂದ್ರವನ್ನು ಕಟ್ಟಲು ಹಾಗೂ ಸಂಸ್ಥಾಪಿಸಲು ಸಹಕಾರ ನೀಡಿದ್ದರಿಂದ, ಅದರ ಸ್ವಾಮಿತ್ವ ತನಗೆ ಇದ್ದು ಅದು ತನ್ನ ನಿಯಂತ್ರಣದಲ್ಲಿರಬೇಕು ಎಂದು ಕ್ಷಣ ಮಾತ್ರ ಯೋಚಿಸಿದರೂ ಬಡಪಾಯಿ ಸಾಧಕನು ಧಮ್ಮ ಅಂದರೆ ಏನೆಂದು ಅರ್ಥ ಮಾಡಿಕೊಂಡಿಲ್ಲವೆಂದು ಅರ್ಥ. ವಾಸ್ತವವಾಗಿ ಕೇಂದ್ರವು ಧಮ್ಮಕ್ಕೆ ಸೇರಿದ್ದು. ಧಮ್ಮವೇ ಪ್ರಮುಖವಾಗಿದೆ. ಧಮ್ಮದ ಪ್ರಾಮುಖ್ಯತೆಯು ಎಲ್ಲಿ ಕಡಿಮೆಯಾಗಲು ಪ್ರಾರಂಭಿಸುತ್ತದೆಯೋ, ಆಗ ಧಮ್ಮವು ಕ್ಷೀಣಿಸಲು ಪ್ರಾರಂಭಿಸುತ್ತದೆ. ಹಿಂದೆ ಬೇರೆ ಬೇರೆ ಸ್ಥಳಗಳಲ್ಲಿ ಮತ್ತು ಬೇರೆ ಬೇರೆ ಅವಧಿಗಳಲ್ಲಿ ಧಮ್ಮದ ಮಹತ್ತರ ಕೆಲಸಗಳನ್ನು ಮಾಡಲಾಯಿತು. ಮತ್ತು ಧಮ್ಮವು ಅಲ್ಲಿ ಅವನತಿ ಹೊಂದಲು ಏನೇನು ಕಾರಣಗಳೆಂದು ಇತಿಹಾಸವು ವಿಶ್ಲೇಷಿಸುತ್ತದೆ. ಒಂದು ಅಥವಾ ಎರಡು ಅಥವಾ ಹತ್ತು ವ್ಯಕ್ತಿಗಳು ಅದರ ಮೇಲೆ ಸ್ವಾಮಿತ್ವವನ್ನು ಸಾಧಿಸಲು ಹಾಗೂ ತಮ್ಮ ನಿಯಂತ್ರಣದಲ್ಲಿರಿಸಿಕೊಳ್ಳಲು ಪ್ರಯತ್ನಿಸಿದರು. ಆ ಕಾರಣದಿಂದ ಧಮ್ಮವು ಕ್ಷೀಣಿಸಿತು. ಅಂತಹ ವ್ಯಕ್ತಿಗಳು ಧಮ್ಮದ ನಿಜವಾದ ಶತೃಗಳು.

ಇತರರು ಧ್ಯಾನ ಮಾಡುವಂತೆ ತಾನೂ ಗಂಭೀರವಾಗಿ ಧ್ಯಾನ ಮಾಡಬೇಕು ಎಂಬುದು ನಿಜವಾದ ಧ್ಯಾನ ಸಾಧಕನ ಏಕೈಕ ಉದ್ದೇಶವಾಗಿರಬೇಕು. ನಾನು ಧ್ಯಾನ ಮಾಡುವುದನ್ನು ನೋಡಿ, ಇತರರು ಧ್ಯಾನ ಮಾಡಲು ಪ್ರೇರಣೆ ಪಡೆಯಬೇಕು ಎಂದು ಆಲೋಚಿಸಬೇಕು. ಅವನ ಏಕೈಕ ಉದ್ದೇಶವು ಧ್ಯಾನ ಮಾಡುವುದು, ಯಾವುದೇ ಭೌತಿಕ ಲಾಭವನ್ನು ಗಳಿಸುವುದಲ್ಲ. ಸೇವೆಯನ್ನು ಮಾಡಿದಾಗ, ದೇಣಿಗೆಯನ್ನು ಕೊಟ್ಟಾಗ, ಧರ್ಮವನ್ನು ಬೋಧಿಸಿದಾಗ ಅದಕ್ಕೆ ಪ್ರತಿಯಾಗಿ ಯಾರಾದರೂ ಏನನ್ನಾದರೂ ನಿರೀಕ್ಷಿಸಿದರೆ, ಆಗ ಅವನು ಧಮ್ಮ ಕ್ಷೇತ್ರದಲ್ಲಿ ಕೇವಲ ನಿಷ್ಪ್ರಯೋಜಕ ವ್ಯಕ್ತಿ. ಇದಕ್ಕೆ ಬದಲಾಗಿ, ಹೆಚ್ಚಿನ ಸಂಖ್ಯೆಯ ಜನರು ಧಮ್ಮದಿಂದ ಪ್ರಯೋಜನ ಪಡೆಯುತ್ತಿದ್ದಾರೆಯೇ ಅಥವಾ ಇಲ್ಲವೇ ಎಂಬುದರಲ್ಲಿಯೇ ಅವನ ಸಂತೋಷವು ಅಡಗಿದ್ದರೆ ಅವನು ನಿಜವಾಗಿಯೂ ಧಾರ್ಮಿಕ ವ್ಯಕ್ತಿ. ಜನರಿಗೆ ಕಲ್ಯಾಣವಾಗಲಿ ಎಂಬ ಉದ್ದೇಶ

ಮಾತ್ರ ಅವನಿಗಿರಬೇಕು. ಇತರರಂತೆ ತಾನೂ ಒಬ್ಬ ಧಮ್ಮ ಸೇವಕ ಎಂದು ಭಾವಿಸಬೇಕು.

ಇಡೀ ಜಗತ್ತಿನಲ್ಲಿ ಹೆಚ್ಚಿನ ಸಂಖ್ಯೆಯ ಧ್ಯಾನ ಸಾಧಕರಿದ್ದಾರೆ ಎಂದು ನನಗೆ ತಿಳಿದಿದೆ. ಅವರು ಅತ್ಯಂತ ಶ್ರದ್ಧೆ ಮತ್ತು ಸಮರ್ಪಣಾ ಭಾವದಿಂದ ಕೆಲಸ ಮಾಡುತ್ತಾ ಧಮ್ಮವನ್ನು ಹರಡುತ್ತಿದ್ದಾರೆ. ಅವರು ಅದನ್ನು ಹೇಗೆ ಹರಡುತ್ತಿದ್ದಾರೆ? ತಮ್ಮ ನಿತ್ಯ ಜೀವನದಲ್ಲಿ ಧಮ್ಮವನ್ನು ಅಳವಡಿಸಿಕೊಳ್ಳುವ ಮೂಲಕ ವಿಪಶ್ಯನವನ್ನು ಅಭ್ಯಸಿಸಿದ ನಂತರ ಅವರು ಇನ್ನೂ ಒಳ್ಳೆಯವರಾಗಿ ಪರಿವರ್ತಿತರಾಗಿರುವುದನ್ನು ನೋಡಿ ಜನರು ಪ್ರಭಾವಿತರಾಗುತ್ತಾರೆ. ಅವರಲ್ಲಿನ ಪರಿವರ್ತನೆಯನ್ನು ಗಮನಿಸಿ ವಿಪಶ್ಯನದ ಕಡೆಗೆ ಆಕರ್ಷಿತರಾಗುತ್ತಾರೆ. ಅವರು ಧಮ್ಮದ ಕಡೆಗೆ ಆಕರ್ಷಿತರಾಗಿರು ವುದು ಯಾವುದೇ ಪಂಥವನ್ನು ಸ್ಥಾಪಿಸುವುದಕ್ಕಾಗಿ ಅಲ್ಲ; ಅಥವಾ ಯಾವುದೇ ರಾಜಕೀಯ ಪಕ್ಷವನ್ನು ಕಟ್ಟುವುದಕ್ಕಾಗಿ ಅಥವಾ ತಮ್ಮ ಅಧಿಕಾರವನ್ನು ಚಲಾಯಿಸುವುದಕ್ಕಾಗಿ ಅಲ್ಲ. ಯಾರು ಧರ್ಮವನ್ನು ಅಭ್ಯಸಿಸುತ್ತಾರೋ ಅವರು ಪ್ರಯೋಜನ ಪಡೆಯುತ್ತಾರೆ. ಇದನ್ನು ನೋಡಿ ವ್ಯಕ್ತಿಯು ಸಂತೋಷಪಡುತ್ತಾನೆ. ಇದಲ್ಲದೇ ಮತ್ತೇನಾದರೂ ಅವನ ಮನಸ್ಸಿನಲ್ಲಿ ಇದ್ದರೆ ಲವಲೇಶದಷ್ಟು ಧಮ್ಮವೂ ಅವನಲ್ಲಿ ಇಲ್ಲವೆಂದರ್ಥ. ಅವನು ಧರ್ಮದಿಂದ ಬಹಳ ದೂರದಲ್ಲಿದ್ದಾನೆ. ಉತ್ಸಾಹಭರಿತನಾಗಿ ಧ್ಯಾನ ಮಾಡುವುದೇ ಅವನ ಏಕೈಕ ಗುರಿಯಾಗಬೇಕು.

ಪ್ರತಿಯೊಬ್ಬರ ಮನಸ್ಸಿನಲ್ಲೂ ಯಾವುದಾದರೂ ಮಲಿನತೆ ಇದ್ದೇ ಇರುತ್ತದೆ ಎಂದು ನನಗೆ ಗೊತ್ತು. ಒಂದು ವೇಳೆ ವ್ಯಕ್ತಿಯಲ್ಲಿ ಯಾವ ಮಲಿನತೆಯೂ ಇಲ್ಲದಿದ್ದರೆ ಅವನು ಅರಹಂತ ಅಥವಾ ಬುದ್ಧ ಅಂದರೆ ಸಂಪೂರ್ಣ ಜ್ಞಾನೋದಯವನ್ನು ಹೊಂದಿದವನಾಗುತ್ತಾನೆ. ಯಾವುದಾದರೂ ಮಲಿನತೆ ತನ್ನೊಳಗೆ ಇದೆಯೇ ಎಂದು ತಿಳಿಯಲು ವ್ಯಕ್ತಿಯು ತನ್ನ ಆಂತರ್ಯವನ್ನು ಅವಲೋಕಿಸಬೇಕು. ಏನಾದರೂ ಇದ್ದರೆ ಅದನ್ನು ನಿರ್ಮೂಲನೆ ಮಾಡಲು ದೃಢ ನಿರ್ಧಾರ ಮಾಡಬೇಕು. ಮಲಿನತೆಯನ್ನು ನಿರ್ಮೂಲನೆ ಮಾಡುವುದಕ್ಕಾಗಿಯೇ ನನಗೆ ಈ ಸಾಧನಾವಿಧಾನವು ಪ್ರಾಪ್ತವಾಗಿದೆ ಎಂದು ಅವನು ಯೋಚಿಸಬೇಕು. ಯಾವ ವ್ಯಕ್ತಿಯಲ್ಲಿ ಸ್ವಾರ್ಥತೆ, ಅಹಂಕಾರ ಮತ್ತು ಸ್ವ-ಕೇಂದ್ರೀಕೃತ ಸ್ವಭಾವಗಳು ಇರುತ್ತವೆಯೋ ಅವನು ಧಮ್ಮದಿಂದ ದೂರವಾಗಿರುತ್ತಾನೆ. ಪ್ರತಿಯೊಬ್ಬ ವ್ಯಕ್ತಿಯು ಇತರರಿಗೆ ಸ್ಫೂರ್ತಿ ನೀಡುವ ತರಹ ಆದರ್ಶ ಜೀವನವನ್ನು ನಡೆಸಬೇಕು. ಇದು ಬಹಳ ಜನರಿಗೆ ಒಳ್ಳೆಯದನ್ನು ಮಾಡಿದೆ ಎಂದು ತಿಳಿದುಕೊಂಡು ಎಲ್ಲರೂ ಧಮ್ಮದ ಕಡೆಗೆ ಆಕರ್ಷಿತರಾಗಬೇಕು. ಈ ಕಾರಣದಿಂದಲೇ ಧಮ್ಮವು ಹರಡುತ್ತಿದೆ. ಅದರ ಹರಡುವಿಕೆಯ ಕೆಲಸದಲ್ಲಿ ನಾನು ಅಡ್ಡಿಯಾಗಬಾರದು, ಯಾವ ಅಡಚಣೆಯನ್ನೂ ಮಾಡಬಾರದೆಂದು ಯೋಚಿಸಬೇಕು. ನನ್ನೊಳಗಿನ ಅಹಂಕಾರವನ್ನು ನಾನು ನಿರ್ಮೂಲನೆ ಮಾಡಬೇಕು.' ಈ ಅಹಂಕಾರವನ್ನು ನಿರ್ಮೂಲನೆ ಮಾಡುವ ಉದ್ದೇಶವು ಇದ್ದಾಗ, ವ್ಯಕ್ತಿಯು ಎಂದಿಗೂ ಅಡ್ಡಿಯಾಗಲು ಸಾಧ್ಯವಿಲ್ಲ. ಆದ್ದರಿಂದ, ವಿಪಶ್ಯನವನ್ನು ಅಭ್ಯಾಸ ಮಾಡಲು ಇಲ್ಲಿಗೆ ಬಂದವರೆಲ್ಲರೂ ಇದನ್ನು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳುತ್ತಾರೆ. ಆದ್ದರಿಂದ, ಮತ್ತೊಮ್ಮೆ ನಾನು ಹೇಳುವುದೇನೆಂದರೆ ನಿಮ್ಮ ಮೊಟ್ಟಮೊದಲ ಕರ್ತವ್ಯವೇನೆಂದರೆ ನಿಮ್ಮನ್ನು ನೀವು ಸುಧಾರಿಸಿಕೊಳ್ಳುವುದು. **ಮೊದಲು ನೀವು ಆಂತರ್ಯದಿಂದ ಪರಿಶುದ್ಧರಾಗಿ, ನಂತರ ಇತರರ ಕಲ್ಯಾಣಕ್ಕಾಗಿ ಕೆಲಸ ಮಾಡಿ. ತನಗೆ ತಾನೇ ಒಳ್ಳೆಯದನ್ನು ಮಾಡಿಕೊಳ್ಳಲಾಗದವನು ಇತರರಿಗೆ ಹೇಗೆ ಒಳ್ಳೆಯದನ್ನು ಮಾಡಬಲ್ಲನು**? ಒಂದೇ ಉದ್ದೇಶ, ಒಂದೇ ಗುರಿ ಮಾತ್ರ ಇರಬೇಕು.ನನ್ನನ್ನು ಶುದ್ಧೀಕರಿಸಿಕೊಳ್ಳದೆ, ನಾನು ಇತರರನ್ನು ಧಮ್ಮದ ಕಡೆಗೆ ಆಕರ್ಷಿಸಲು ಸಾಧ್ಯವಿಲ್ಲ. ನನ್ನಲ್ಲಿ ಒಳ್ಳೆಯ ಗುಣಗಳನ್ನು ಗಮನಿಸಿದ ನಂತರವೇ ಜನರು ಧಮ್ಮದ ಕಡೆಗೆ ಆಕರ್ಷಿಸಲ್ಪಟ್ಟಿದ್ದಾರೆ ಮತ್ತು ಅವರು ಮುಂದೆಯೂ ಬರುತ್ತಿರುತ್ತಾರೆ.'

ನೀವು ಜನರ ಕಲ್ಯಾಣಕ್ಕಾಗಿ ಕೆಲಸ ಮಾಡುವ ಉದ್ದೇಶ ಹೊಂದಿದ್ದರೆ, ಮೊದಲು ನಿಮ್ಮೊಳಗೆ ಅಹಂಕಾರ ಸ್ವಲ್ಪವಾದರೂ ಇದೆಯೇ ಎಂದು ಪರೀಕ್ಷಿಸಿಕೊಳ್ಳಿ; ನೀವು ಧಮ್ಮದಿಂದ ಯಾವುದೇ ರೀತಿಯ ಭೌತಿಕ ವಸ್ತುವನ್ನು ಇನ್ನೂ ನಿರೀಕ್ಷಿಸುತ್ತಿದ್ದೀರಾ? ಧರ್ಮವು ಕೊಡುವುದನ್ನು ಕಲಿಸುತ್ತದೆ, ತೆಗೆದುಕೊಳ್ಳುವುದನ್ನು ಅಲ್ಲ...'ನಾನು ಏನನ್ನು ಕೊಡಬಹುದು, ಅದಕ್ಕೆ ನಾನು ಹೇಗೆ ಸಹಾಯ ಮಾಡಬಹುದು?' ಎಂದು ನೀವು ಯೋಚಿಸಬೇಕು. ತನ್ನ ಆದರ್ಶಯುಕ್ತ ಜೀವನದಿಂದ ಜನರನ್ನು ಪ್ರೇರೇಪಿಸುವುದೇ ದೊಡ್ಡ ಕಾಣಿಕೆಯಾಗಿರುತ್ತದೆ. ಬೇರೆ ಎಲ್ಲಾ ಕಾಣಿಕೆಗಳು, ಉದಾಹರಣೆಯಾಗಿ ಹೇಳುವುದಾದರೆ ಒಂದುಲಕ್ಷ ರೂಪಾಯಿಗಳ ದೇಣಿಗೆಯೂ ಕ್ಷುಲ್ಲಕವಾಗುತ್ತದೆ. ಇದಕ್ಕಿಂತ ದೊಡ್ಡ ಕಾಣಿಕೆ ಯಾವುದೂ ಇಲ್ಲ. ಸಂಪೂರ್ಣವಾಗಿ ಪರಿವರ್ತನೆಯಾಗಿರುವ ವ್ಯಕ್ತಿಯನ್ನು ನೋಡಿದಾಗ, ಒಬ್ಬ ವ್ಯಕ್ತಿಯು "ನೋಡು! ಅವನು ಎಷ್ಟು ಪರಿವರ್ತನೆಯಾಗಿದ್ದಾನೆ! ನಾನು ಕೂಡ ಅದೇ ರೀತಿಯಲ್ಲಿ ನನ್ನನ್ನು ನಾನು ಪರಿವರ್ತಿಸಿಕೊಳ್ಳಬೇಕು" ಎಂದು ಸ್ಫೂರ್ತಿ ಪಡೆಯುತ್ತಾನೆ.

ನನ್ನ ಧಮ್ಮ ಪುತ್ರರು ಮತ್ತು ಪುತ್ರಿಯರಿಂದ ಧಮ್ಮ ಕುಟುಂಬವಾಗುತ್ತದೆ. ಈ ಕುಟುಂಬವು ಬೆಳೆಯಲಿ ಮತ್ತು ಅಭಿವೃದ್ಧಿ ಹೊಂದಲಿ! ದೊಡ್ಡ ಕುಟುಂಬದ ಮುಖಂಡನು ಕುಟುಂಬದ ಪ್ರಗತಿಯನ್ನು ನೋಡಿ ಸಂತೋಷಪಡುವಂತೆ ನನಗೂ ಸಂತೋಷವಾಗುತ್ತದೆ. ಈ ಧಮ್ಮ ಕುಟುಂಬದಲ್ಲಿ ವಾಸ್ತವವಾಗಿ ಧರ್ಮ ಅಂದರೆ ಏನು ಎಂದು ಅರ್ಥ ಮಾಡಿಕೊಳ್ಳದ ಕೆಲವರು ಇರಬಹುದು. ಇಂತಹ ನಿಷ್ಪ್ರಯೋಜಕ ಜನರು ಕೆಲವರಿದ್ದಾರೆ. ಇವರು ತಮ್ಮ ಸ್ವಾರ್ಥ ಉದ್ದೇಶದಿಂದ ಅಧಿಕಾರ, ಸ್ಥಾನಮಾನ ಮತ್ತು ಪ್ರಾಬಲ್ಯಕ್ಕಾಗಿ ಕೆಲಸ ಮಾಡುತ್ತಾರೆ. ಆದರೆ ಹೆಚ್ಚು ಜನರು ತಮ್ಮನ್ನು ತಾವು ಪರಿವರ್ತಿಸಿಕೊಳ್ಳಲು ಇಲ್ಲಿಗೆ ಬರುತ್ತಾರೆ ಮತ್ತು ಅವರು ತಮ್ಮನ್ನು ತಾವು ಪರಿವರ್ತಿಸಿಕೊಳ್ಳುತ್ತಾರೆ. ಇದರಿಂದಾಗಿಯೇ ಕುಟುಂಬದ ಪ್ರಗತಿಯು ಮುಂದುವರೆಯುತ್ತದೆ. ಆದುದರಿಂದ, ನಿಮ್ಮೊಳಗೆ ನೀವು ಪರೀಕ್ಷಿಸಿಕೊಳ್ಳಿ, ನಿಮ್ಮ ದೋಷಗಳನ್ನು ಕಂಡುಕೊಳ್ಳಿ ಮತ್ತು ಅವುಗಳನ್ನು ನಿರ್ಮೂಲನೆ ಮಾಡಿ ಎಂದು ನಾನು ಮತ್ತೊಮ್ಮೆ ನಿಮ್ಮನ್ನು ಆಗ್ರಹಿಸುತ್ತೇನೆ. ಮಲಿನತೆಗಳು ತಾವಾಗಿಯೇ ಹೊರಬರುತ್ತವೆ ಏಕೆಂದರೆ ಅವುಗಳನ್ನು ತೆಗೆದುಹಾಕುವ ಸಾಧನಾವಿಧಿಯನ್ನು ನಾವು ಪಡೆದುಕೊಂಡಿದ್ದೇವೆ. ಒಳಗಿನ ಕೊಳೆಗಳು ಅಲ್ಲಿ ಮುಂದುವರಿಯಲು ಸಾಧ್ಯವಿಲ್ಲ.ನೀವು ವಿಪಶ್ಯನ ಧ್ಯಾನದಲ್ಲಿ ಹೆಚ್ಚೆಚ್ಚು ಬಲಶಾಲಿಯಾಗುತ್ತಿದ್ದಂತೆ, ನೀವು ಸಮತೆಯಿಂದಿದ್ದರೆ ಇವುಗಳು ಈ ಸಂವೇದನೆ ಅಥವಾ ಆ ಸಂವೇದನೆಯ ಮೂಲಕವೋ ಹೊರಬರುತ್ತವೆ.

ನಿಮ್ಮನ್ನು ನೀವು ಸುಧಾರಿಸಿಕೊಳ್ಳಬೇಕು, 'ನಾನು ಈಗ ಇರುವುದಕ್ಕಿಂತ ಇನ್ನೂ ಹೆಚ್ಚು ಉತ್ತಮನಾಗಬೇಕು.' ಎಂಬುದೇ ನಿಮ್ಮ ಏಕೈಕ ಗುರಿಯಾಗಬೇಕು. ನೀವೆಲ್ಲರೂ ಹೀಗೆ ಯೋಚಿಸಲು ಆರಂಭಿಸಿದರೆ ನೀವು ಬಹುತೇಕ ಗುರಿಯನ್ನು ಸಾಧಿಸಿದಂತೆಯೇ. ಈ ಕೇಂದ್ರದ ಉದ್ಘಾಟನೆಯ ಸಫಲತೆ ನೀವು ಈ ರೀತಿ ಚಿಂತಿಸುವುದರ ಮೇಲೆ ಅವಲಂಬಿತವಾಗಿದೆ.

ಜಗತ್ತಿನಲ್ಲಿ ಬೇರೆ ಬೇರೆ ಕೇಂದ್ರಗಳನ್ನು ಸಹ ಸ್ಥಾಪಿಸಲಾಗುತ್ತಿದೆ. ಶುದ್ಧವಾದ ಧರ್ಮವನ್ನು ಎಲ್ಲರಿಗೂ ಕಲಿಸುವ ಮೂಲಕ ಸಾಧ್ಯವಾದಷ್ಟು ಜನರಿಗೆ ಒಳ್ಳೆಯದನ್ನು ಮಾಡುವ ಏಕೈಕ ಉದ್ದೇಶದಿಂದ ಎಲ್ಲ ಕೇಂದ್ರಗಳನ್ನು ಸ್ಥಾಪಿಸಲಾಯಿತು. ಬೇರೆ ಪಂಥವೊಂದನ್ನು ಸ್ಥಾಪಿಸುವ ಉದ್ದೇಶವಾಗಿರಲಿಲ್ಲ. ಧರ್ಮಕ್ಕೂ ಪಂಥಕ್ಕೂ ಯಾವುದೇ ಸಂಬಂಧವಿಲ್ಲ. ಮಾನವರು ಅವರು ಈ ಜಾತಿಯವರಾಗಲೀ ಅಥವಾ ಆ ಜಾತಿಯವರಾಗಲೀ ಅಥವಾ ಈ ವಂಶಸ್ಥರಾಗಿರಲೀ ಅಥವಾ ಆ ವಂಶಸ್ಥರಾಗಿರಲೀ ಅಥವಾ ಅವರು ಬಿಳಿಯರಾಗಿರಲೀ ಅಥವಾ ಕರಿಯರಾಗಿರಲೀ ಅವರೆಲ್ಲರೂ ಒಂದೇ, ಅವನು ಮನುಷ್ಯನಾಗಿದ್ದರಷ್ಟೇ ಸಾಕು. ಅವನು ಮನುಷ್ಯನಾಗಿದ್ದರೆ ಅವನು ಧರ್ಮಮಾರ್ಗದಲ್ಲಿ ನಡೆದು ಅದರಿಂದ ಪ್ರಯೋಜನವನ್ನು ಪಡೆಯಲು ಸಾಧ್ಯವಾಗುತ್ತದೆ. ಇದಕ್ಕಾಗಿ ಅವನು ತನ್ನ ಹೆಸರನ್ನು ಬದಲಾಯಿಸುವ ಅವಶ್ಯಕತೆಯಿಲ್ಲ ಅಥವಾ ತನ್ನ ಜಾತಿಯನ್ನು ಬದಲಾಯಿಸುವ ಅವಶ್ಯಕತೆಯಿಲ್ಲ. ಅವನು ತನ್ನ ಪಂಥವನ್ನು ಸಹ ಬದಲಾಯಿಸುವ ಅವಶ್ಯಕತೆಯಿಲ್ಲ. ಅವನು ಮಾಡಬೇಕಾಗಿರುವುದು ಏನೆಂದರೆ ಮಾನವೀಯ ಗುಣಗಳನ್ನು ಬೆಳೆಸಿಕೊಂಡು ಒಳ್ಳೆಯ ಮನುಷ್ಯನಾಗಿರುವುದು. ಇದನ್ನು ಮನಸ್ಸಿನಲ್ಲಿಟ್ಟುಕೊಂಡು ನೀವು ನಿಮ್ಮ ಕೆಲಸವನ್ನು ಮಾಡಿ. ರಾಜಕೀಯದಲ್ಲಿ ಪಾಲ್ಗೊಳ್ಳಲು ಒಲವು ಇದ್ದರೆ, ಅದರಲ್ಲಿ ಪಾಲ್ಗೊಳ್ಳಬಹುದು. ಆದರೆ ವಿಪಶ್ಯನದ ಈ ಸಾಧನಾವಿಧಿಯು ರಾಜಕೀಯಕ್ಕಿಂತ ಉತ್ಕೃಷ್ಟವಾದುದು. ರಾಜಕೀಯದ ಪ್ರಾಬಲ್ಯ ಅದರ ಮೇಲಿರಬಾರದು.

ಮೇಲೆ ತಿಳಿಸಲಾದ ಸಲಹೆಗಳಂತೆ ನೀವು ಕೆಲಸ ಮಾಡುವುದನ್ನು ಮುಂದುವರಿಸಿದರೆ ನೀವು ಸಫಲರಾಗುವುದು ಖಂಡಿತ. ಸ್ವತಃ ತನ್ನನ್ನು ತಾನು ಸುಧಾರಿಸಿಕೊಳ್ಳುವುದೇ ಈ ಧ್ಯಾನದ ಉದ್ದೇಶ. ನನ್ನ ಎಲ್ಲಾ ಧಮ್ಮ ಪುತ್ರರು ಮತ್ತು ಪುತ್ರಿಯರೇ! ನೀವೆಲ್ಲರೂ ಶುದ್ಧ ಧಮ್ಮದಲ್ಲಿ ಪ್ರಗತಿ ಹೊಂದಿರಿ! ಸಾಮರಸ್ಯದಿಂದ ಜೀವಿಸುತ್ತಾ ನಿಮ್ಮ ಎಲ್ಲಾ ಜವಾಬ್ದಾರಿಗಳನ್ನು ನೀವು ನಿಭಾಯಿಸಿರಿ! ನೀವು ಸಂತೋಷದಿಂದಿರಿ! ಇತರರು ನಿಮ್ಮೊಂದಿಗೆ ಸಂತೋಷವಾಗಿರಲಿ! ಇದು ನಿಮ್ಮೆಲ್ಲರಿಗೂ ನನ್ನ ಆಶೀರ್ವಾದ. ನೀವು ಸಂತೋಷದಿಂದಿರಿ! ನೀವು ಶಾಂತಿಯಿಂದಿರಿ!

**ಗೋಯಂಕಾಜಿಯವರೊಡನೆ ಪ್ರಶ್ನೋತ್ತರಗಳು**

**RNI. No. : KARKAN/2015/68727. Postal Regn. No.: RNP/KA/BGS/2253/2023-25**
**Published On 10th & Posted On 20th of September Posted At : Bengaluru PSO, B'luru 26. Price(Annual)Rs.30.**

**ಪ್ರಶ್ನೆ:** ನೀವು 'ಮನಸ್ಸು' ಎನ್ನುವಾಗ ನಿಮ್ಮ ಅಭಿಪ್ರಾಯವೇನು ನನಗೆ ತಿಳಿಯಲಿಲ್ಲ. ನಾನು ಮನಸ್ಸನ್ನು ಕಾಣಲಾಗುತ್ತಿಲ್ಲ.

**ಶ್ರೀ ಗೋಯಂಕಾ:** ಅದು ಶರೀರದ ಪ್ರತಿ ಪರಮಾಣುವಿನಲ್ಲಿಯೂ ಇದೆ. ನಿಮಗೆ ಎಲ್ಲಿ ಯಾವ ಅನುಭವವಾಗುತ್ತದೆಯೋ ಅಲ್ಲಿ ಮನಸ್ಸು ಇದೆ. ಮನಸ್ಸು ಅನುಭವಿಸುತ್ತದೆ.

**ಪ್ರಶ್ನೆ:** ಹಾಗಾದರೆ ಮನಸ್ಸೆಂದರೆ ಮೆದುಳು ಎಂದು ನೀವು ಅರ್ಥೈಸುತ್ತಿಲ್ಲ?

**ಉತ್ತರ:** ಓ ಇಲ್ಲ ಇಲ್ಲ. ಇಲ್ಲಿ ಪಶ್ಚಿಮ ದೇಶಗಳಲ್ಲಿ ಮನಸ್ಸು ತಲೆಯಲ್ಲಿದೆ ಎಂದು ನೀವು ತಿಳಿದಿದ್ದೀರಿ. ಇದು ತಪ್ಪು ಭಾವನೆ.

**ಪ್ರಶ್ನೆ :** ಇಡೀ ಶರೀರವೇ ಮನಸ್ಸು?

**ಉತ್ತರ :** ಹೌದು, ಇಡೀ ಶರೀರವೇ ಮನಸ್ಸನ್ನು ಒಳಗೊಂಡಿದೆ. ಇಡೀ ಶರೀರ.

**ಪ್ರಶ್ನೆ:** "ನಾನು" ಎಂಬುದರ ಅನುಭವವನ್ನು ನೀವು ನಿಷೇಧಾತ್ಮಕ ಅರ್ಥದಲ್ಲಿ ಹೇಳುತ್ತೀರಿ. ಇದಕ್ಕೆ ಸಕಾರಾತ್ಮಕ ಮಗ್ಗುಲು ಇಲ್ಲವೇ? ಒಬ್ಬ ಮನುಷ್ಯನನ್ನು ಸಂತೋಷ, ಶಾಂತಿ, ಭಾವಾವೇಶಗಳಿಂದ ತುಂಬುವ 'ನಾನು' ಎಂಬ ಅನುಭವವಿಲ್ಲವೇ?

**ಉತ್ತರ:** ಧ್ಯಾನದಿಂದ ನಿಮಗೆ ಎಲ್ಲಾ ಇಂದ್ರಿಯ ಸುಖಗಳೂ ಅಶಾಶ್ವತವೆಂದು ಗೊತ್ತಾಗುತ್ತದೆ. ಅವು ಬರುತ್ತವೆ ಮತ್ತು ಹೊರಟು ಹೋಗುತ್ತವೆ. ಈ 'ನಾನು' ಅವುಗಳನ್ನು ನಿಜವಾಗಿಯೂ ಅನುಭವಿಸಿದರೆ, ಅವು 'ನನ್ನ' ಸುಖಗಳಾಗಿದ್ದರೆ, ಆಗ ಈ 'ನಾನು' ಅವುಗಳ ಒಡೆಯನಾಗ ಬೇಕಾಗಿತ್ತು. ಆದರೆ ಅವು ನನ್ನ ಹತೋಟಿಗೊಳಪಡದೆ ಉದ್ಭವಿಸಿ, ಇಲ್ಲವಾಗುತ್ತವೆ. ಅಲ್ಲಿ 'ನಾನು' ಎಂಬುದು ಯಾವುದಿದೆ?

**ಪ್ರಶ್ನೆ:** ನಾನು ಇಂದ್ರಿಯ ಸುಖಗಳ ಬಗ್ಗೆ ಮಾತಾಡುತ್ತಿಲ್ಲ. ಆದರೆ ಇನ್ನೂ ಹೆಚ್ಚು ಆಳವಾದ ಹಂತದಲ್ಲಿ ಪ್ರಶ್ನೆ ಕೇಳುತ್ತಿದ್ದೇನೆ.

**ಉತ್ತರ:** ಆ ಹಂತದಲ್ಲಿ 'ನಾನು'ವಿಗೆ ಪ್ರಾಮುಖ್ಯತೆಯೇ ಇಲ್ಲ. ಆ ಹಂತವನ್ನು ನೀವು ಮುಟ್ಟಿದಾಗ ಅಹಂ ಅಳಿಸಿಹೋಗುತ್ತದೆ. ಅಲ್ಲಿ ಬರೀ ಆನಂದವೇ ಇರುತ್ತದೆ. 'ನಾನು' ಎಂಬ ಪ್ರಶ್ನೆ ಅಲ್ಲಿ ಉದ್ಭವಿಸುವುದೇ ಇಲ್ಲ.

**ಪ್ರಶ್ನೆ:** ಹಾಗಾದರೆ 'ನಾನು' ಎನ್ನುವುದರ ಬದಲು ಒಬ್ಬ ವ್ಯಕ್ತಿಯ ಅನುಭವ ಎನ್ನೋಣ.

**ಉತ್ತರ:** ಅನುಭವವು ಬರೀ ಅನುಭವ. ಅನುಭವಿಸುವವರು ಅಲ್ಲಿ ಯಾರೂ ಇಲ್ಲ. ಘಟನೆಗಳು ಕೇವಲ ಸಂಭವಿಸುತ್ತಿರುತ್ತವೆ ಅಷ್ಟೆ. ಆಗ, ಅನುಭವಿಸುವ 'ನಾನು' ಇರಬೇಕು ಎಂದು ನಿಮಗೆ ಅನಿಸುತ್ತದೆ. ಆದರೆ ನೀವು ಅಭ್ಯಾಸ ಮಾಡಿದಂತೆಲ್ಲ ಅಹಂ ಅಳಿಸಿ ಹೋಗುವ ಹಂತವನ್ನು ನೀವು ಮುಟ್ಟುವಿರಿ. ಆಗ ನಿಮ್ಮ ಪ್ರಶ್ನೆಯು ಮಾಯವಾಗುತ್ತದೆ.

**ಪ್ರಶ್ನೆ:** 'ನಾನು' ಇಲ್ಲಿಗೆ ಬರಬೇಕೆಂದು ಇಚ್ಛಿಸಿದುದರಿಂದಲೇ 'ನಾನು' ಇಲ್ಲಿಗೆ ಬಂದೆ.

**ಉತ್ತರ:** "ಹೌದು, ನಿಜ. ವ್ಯವಹಾರದ ದೃಷ್ಟಿಯಿಂದ ನಾವು 'ನಾನು' ಮತ್ತು 'ನನ್ನದು' ಎಂಬುದರಿಂದ ದೂರ ಸರಿಯಲಾರೆವು. ಆದರೆ ಅವಕ್ಕೆ ಅಂಟಿಕೊಂಡು ಅವೇ ಸತ್ಯವಾಗಿದೆ ಎಂಬುವ ನಮ್ಮ ದೃಢಭಾವನೆಯು ತಪ್ಪು, ಇದೇ ನಮಗೆ ದುಃಖವನ್ನು ಕೊಡುವುದು.

**ಪ್ರಶ್ನೆ:** ನಮ್ಮ ದುಃಖಕ್ಕೆ ಕಾರಣರಾದ ಜನಗಳಿದ್ದಾರೆಯೇ ಎಂದು ನಾನು ಆಶ್ಚರ್ಯಪಡುತ್ತಿದ್ದೆ?

**ಉತ್ತರ:** ನಿಮಗೆ ಯಾರೂ ದುಃಖವನ್ನು ಕೊಡುವುದಿಲ್ಲ. ನಿಮ್ಮ ಮನಸ್ಸಿನಲ್ಲಿ ತಳಮಳವುಂಟು ಮಾಡಿಕೊಂಡು ನಿಮಗೆ ನೀವೇ ದುಃಖವನ್ನು ಉಂಟುಮಾಡಿಕೊಳ್ಳುತ್ತೀರಿ. ಇದನ್ನು ಮಾಡದಿರಲು ನೀವು ಕಲಿತರೆ, ಪ್ರತಿಯೊಂದು ಸಂದರ್ಭದಲ್ಲಿಯೂ ಶಾಂತಿ ಮತ್ತು ಸಂತೋಷದಿಂದಿರಲು ನಿಮಗೆ ಸುಲಭವಾಗುತ್ತದೆ.

**ಭವತು ಸಬ್ಬ ಮಂಗಳಂ**
**(ಎಲ್ಲಾ ಜೀವಿಗಳಿಗೂ ಮಂಗಳವಾಗಲಿ)**

**ವಿಪಶ್ಯನವನ್ನು ಕಲಿಯುವ ಒಬ್ಬ ಹಿಂದೂ ತನ್ನನ್ನು ತಾನು ಹಿಂದೂ ಎಂದು ಕರೆದುಕೊಳ್ಳಬಹುದು; ಹೀಗೆಯೇ ಒಬ್ಬ ಮುಸ್ಲಿಂ, ಒಬ್ಬ ಜೈನ, ಒಬ್ಬ ಕ್ರೈಸ್ತ, ಒಬ್ಬ ಬೌದ್ಧ ಮಾಡಬಹುದು. ಮುಖ್ಯವಾದ ಅಂಶವೆಂದರೆ ಒಳ್ಳೆಯ ವ್ಯಕ್ತಿಯಾಗುವುದು, ಸಂತೋಷ ಮತ್ತು ಸಾಮರಸ್ಯದ ಜೀವನ ನಡೆಸುವುದು, ಒಳ್ಳೆಯ ಮಾನವನಾಗಲು ಧಮ್ಮವು ಪ್ರತಿಯೊಬ್ಬರಿಗೂ ಸಹಾಯ ಮಾಡುತ್ತದೆ.**
**–ಎಸ್.ಎನ್. ಗೋಯಂಕಾ**

******

**ಧಮ್ಮ ಪಫುಲ್ಲಾ, ಬೆಂಗಳೂರು**

**10 ದಿನದ ಶಿಬಿರಗಳು:**ಸೆಪ್ಟಂಬರ್ 11–22,ಅಕ್ಟೋಬರ್ 3–14, 16–27,30–10 ನವೆಂಬರ್ 13–24, 27–8 ಡಿಸೆಂಬರ್ 11–22.

**ವಿಳಾಸ :** ಧಮ್ಮ ಪಫುಲ್ಲ, ಆಲೂರು, ದಾಸನಪುರ ಹೋಬಳಿ, ಬೆಂಗಳೂರು. ರಾಷ್ಟ್ರೀಯ ಹೆದ್ದಾರಿ–4ರಲ್ಲಿ, ಹಿಮಾಲಯ ಡ್ರಗ್ ಕಂಪನಿಯ ಎದುರಿನ ಮಾಕಳಿ ಕ್ರಾಸ್‌ಗೆ ಬಂದರೆ ಆಟೋರಿಕ್ಷಾ ಸಿಗುತ್ತವೆ. ಬೆಂಗಳೂರು ಸಿಟಿ ಬಸ್ ನಿಲ್ದಾಣದಿಂದ (ಮೆಜೆಸ್ಟಿಕ್)ನಗರ ಸಾರಿಗೆ ಬಸ್ ಸಂಖ್ಯೆ :256,258,258ಸಿ. ಸಂಪರ್ಕ ಸಂಖ್ಯೆಗಳು: 99725 88377, 63615 70725, 99725 88377, 99009 55930. **ಇ–ಮೇಲ್ :** info@paphulla. dhamma. org;website; www.vridhamma.org.

**ಧಮ್ಮ ನಗರಿ ವಿಪಶ್ಯನ ಧ್ಯಾನ ಕೇಂದ್ರ, ದಾವಣಗೆರೆ.**

**ಹತ್ತು ದಿನದ ಶಿಬಿರಗಳು** –2024: ಮೇ 29 ರಿಂದ ಜೂನ್ 9, ಜೂನ್ 19 ರಿಂದ 30, ಜುಲೈ 10 ರಿಂದ 21, ಜುಲೈ 31 ರಿಂದ ಆಗಸ್ಟ್ 11, ಆಗಸ್ಟ್ 24 ರಿಂದ ಸೆಪ್ಟಂಬರ್ 4, ಸೆಪ್ಟಂಬರ್ 11 ರಿಂದ 22, ಅಕ್ಟೋಬರ್ 6–17, ನವೆಂಬರ್ 6 ರಿಂದ 17, ನವೆಂಬರ್ 27 ರಿಂದ ಡಿಸೆಂಬರ್ 8,ಡಿಸೆಂಬರ್ 18 ರಿಂದ 29.

**ಮೂರು ದಿನದ ಶಿಬಿರಗಳು** 2024– ಮಾರ್ಚ್ 14 ರಿಂದ 17 ಮತ್ತು 28 ರಿಂದ 31. ಅಕ್ಟೋಬರ್ 3–6.

**ಒಂದು ದಿನದ ಶಿಬಿರಗಳು :** (ಗೋಯಂಕಾಜಿಯವರ ಕನಿಷ್ಠ ಒಂದು ಶಿಬಿರ ಪೂರೈಸಿರುವವರಿಗೆ ಮಾತ್ರ)

ಸೆಪ್ಟಂಬರ್ 29, ಅಕ್ಟೋಬರ್ 13, ನವೆಂಬರ್ 3, ನವೆಂಬರ್ 24, ಡಿಸೆಂಬರ್ 15.

ವೆಬ್‌ಸೈಟ್ :https://www. dhamma. org/en/schedules/schnagari

**ವಂತಿಗೆ : ವಾರ್ಷಿಕ: ರೂ.30, ಆಜೀವ: ರೂ.500. ವಂತಿಗೆ ಸಂದಾಯ ಮಾಡಬೇಕಾದ ಬ್ಯಾಂಕ್ ಖಾತೆ :3194101004234; IFSC code:CNRB0003194; ಕೆನರಾ ಬ್ಯಾಂಕ್, ನಾಗರಬಾವಿ, ಬೆಂಗಳೂರು. ಖಾತೆದಾರರು:ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ. ಹಣ ಸಂದಾಯದ ವಿವರ ಮತ್ತು ಪತ್ರಿಕೆ ಕಳುಹಿಸಬೇಕಾದ ಅಂಚೆ ವಿಳಾಸವನ್ನು ಶ್ರೀಮತಿ ಪುಷ್ಪ .ಎಸ್., ಮೊ.ಸಂ:7337734934 ಗೆ ಎಸ್.ಎಮ್.ಎಸ್.ಮಾಡಿರಿ.**

**ಮುದ್ರಕರು:** ಬಿ.ಪ್ರದೀಪ ಕುಮಾರ, **ಪ್ರಕಾಶಕರು:** ಶ್ರೀಮತಿ ಆರ್. ಚಂದ್ರಮತಿ ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್ ಪರವಾಗಿ.
**ಮುದ್ರಣ:** ಐರಣಿ ಆಫ್‌ಸೆಟ್ ಪ್ರಿಂಟರ್ಸ್, 4ನೇ ತಿರುವು, ಕೆ.ಹೆಚ್.ಬಿ.ಕಾಲೋನಿ,ದಾವಣಗೆರೆ–2.**ಪ್ರಕಾಶನ:**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್, #93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–560070. **ಗೌರವ ಸಂಪಾದಕರು:** ಜಿ.ಟಿ. ಗೋವಿಂದಪ್ಪ

**Printed by** B.Pradeep Kumar, **Published by** Smt. R. Chandramathi on be half of Karnataka Vipassana Prachara Samithi Trust and **Printed at**: Airani Offset Printers, 4th Cross, K.H.B.Colony, Davangere-2 and **Published at** Karnataka Vipassana Prachara Samithi Trust, #93, 30th Cross, Banashankari 2nd Stage, Bengaluru - 70. **Editor: G.T. Govindappa,**

ಇಂದ:
**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್**
#93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ,
ಬೆಂಗಳೂರು–560070.

ಗೆ,